ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

**ಅತೀ ತುರ್ತು**

ದೂರವಾಣಿ: 080-22343904/05

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು - 560 001.

ಸಂ:ಕಾಶಿಇ/ಶೈವಿ/118/ಎಫ್ಐಪಿ-ಪಿಹೆಚ್.ಡಿ-ಪ್ರಗತಿ/2017-18

ದಿನಾಂಕ:17.08.2017

# ಸುತ್ತೋಲೆ

ವಿಷಯ: ಯು.ಜಿ.ಸಿ.ಯ ಎಫ್.ಐ.ಪಿ/ಎಫ್.ಡಿ.ಪಿ. ಯಡಿಯಲ್ಲಿ ಪಿಹೆಚ್.ಡಿ./ಎಂ.ಫಿಲ್ ವ್ಯಾಸಂಗ/ ಸಂಶೋಧನೆ ಕೈಗೊಳ್ಳಲು ನಿಯೋಜಿತರಾಗಿರುವ ಸರ್ಕಾರಿ ಪದವಿ ಕಾಲೇಜುಗಳ ಅಧ್ಯಾಪಕರು ಸದರಿ ವ್ಯಾಸಂಗವನ್ನು ಪೂರ್ಣಗೊಳಿಸಿರುವ/ಪೂರ್ಣಗೊಳಿಸದೇ ಇರುವ ಬಗ್ಗೆ ಮಾಹಿತಿ ಸಲ್ಲಿಸುವ ಕುರಿತು.

ಉಲ್ಲೇಖ: ಮಾನ್ಯ ಆಯುಕ್ತರ ಟಿಪ್ಪಣಿ ಸಂಖ್ಯೆ: ಕಾಶಿಆ/01/ಆಆಶಾ/2017-18, ದಿ:16.08.2017.

* * * * * *

ಯು.ಜಿ.ಸಿ.ಯ ಎಫ್.ಐ.ಪಿ./ಎಫ್.ಡಿ.ಪಿ. ಯೋಜನೆಯಡಿಯಲ್ಲಿ ಪಿಹೆಚ್.ಡಿ/ಎಂ.ಫಿಲ್ ವ್ಯಾಸಂಗ/ ಸಂಶೋಧನೆ ಕೈಗೊಳ್ಳಲು ಆಯ್ಕೆಯಾದ ಸರ್ಕಾರಿ ಪದವಿ ಕಾಲೇಜುಗಳ ಅಧ್ಯಾಪಕರುಗಳನ್ನು ಪೂರ್ಣಕಾಲಿಕವಾಗಿ ಸದರಿ ವ್ಯಾಸಂಗಕ್ಕಾಗಿ ಸಂಬಂಧಿಸಿದ ವಿಶ್ವವಿದ್ಯಾಲಯ/ಸಂಶೋಧನಾ ಸಂಸ್ಥೆಗಳಿಗೆ ಗರಿಷ್ಠ ಅವಧಿಗೆ ನಿಯೋಜಿಸಲಾಗುತ್ತಿದೆ. ಅಂತಹ ಅಧ್ಯಾಪಕರುಗಳು ನಿಗದಿತ ಅವಧಿಯಲ್ಲಿ ಸದರಿ ವ್ಯಾಸಂಗವನ್ನು ಪೂರ್ಣಗೊಳಿಸಿರುತ್ತಾರೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಪರಿಶೀಲಿಸಬೇಕಾಗಿರುತ್ತದೆ.

ಆದ್ದರಿಂದ **ಸರ್ಕಾರಿ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳು** ಈ ವಿಷಯವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸುವುದರೊಂದಿಗೆ ತಮ್ಮ ವೈಯಕ್ತಿಕ ಗಮನ ಹರಿಸಿ, **ಯು.ಜಿ.ಸಿ.ಯ ಎಫ್ಐಪಿ/ಎಫ್ಡಿಪಿ** ಯಡಿಯಲ್ಲಿ ಪಿಹೆಚ್.ಡಿ. ಉನ್ನತ **ವ್ಯಾಸಂಗ/ಸಂಶೋಧನೆ ಕೈಗೊಳ್ಳಲು ಈಗಾಗಲೇ ನಿಯೋಜನೆಗೊಂಡು** ಸಂಶೋಧನೆಯನ್ನು ಪೂರ್ಣಗೊಳಿಸಿರುವ **ಹಾಗೂ ಸಂಶೋಧನೆಯನ್ನು ಪೂರ್ಣಗೊಳಿಸದೇ ಇರುವ ಅಧ್ಯಾಪಕರುಗಳ** ಮಾಹಿತಿಯನ್ನು ಈ ಪತ್ರಕ್ಕೆ ಲಗತ್ತಿಸಿರುವ ನಮೂನೆ-1ರಲ್ಲಿ (Excel Format ನಲ್ಲಿ ಮಾತ್ರ) ಭರ್ತಿ ಮಾಡಿ ಯಾವುದೇ ಕಾರಣವನ್ನು ವಿಳಂಬಕ್ಕೆ ಆಸ್ಪದ ನೀಡದೆ **ದಿನಾಂಕ:21.08.2017 ರೊಳಗಾಗಿ ಇ-ಮೇಲ್** ವಿಳಾಸ: **dceacademic.fip@gmail.com** ಗೆ ಕಳುಹಿಸುವಂತೆ ಸೂಚಿಸಲಾಗಿದೆ.

dceacademic.fip@gmail.com

ಮುಂದುವರೆದು, ನಮೂನೆ-1 ರಲ್ಲಿ ಭರ್ತಿ ಮಾಡಿರುವ ಮಾಹಿತಿಗಳ ಎಲ್ಲಾ ಅಗತ್ಯ ದಾಖಲಾತಿಗಳನ್ನು ತಮ್ಮ ಜಿಲ್ಲಾ ವ್ಯಾಪ್ತಿಯ ಲೀಡ್ ಪ್ರಾಂಶುಪಾಲರುಗಳಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ. ತಪ್ಪಿದ್ದಲ್ಲಿ ಮುಂದಿನ ಆಗು-ಹೋಗುಗಳಿಗೆ ಮತ್ತು ತಪ್ಪು ಮಾಹಿತಿಗಳಿಗೆ ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರೇ ನೇರ ಹೊಣೆಗಾರರಾಗಿರುತ್ತಾರೆ ಎಂಬ ಅಂಶವನ್ನು ನಿಮಗೆ ತಿಳಿಸಲಾಗಿದೆ.

**ಕಾಲೇಜು ಶಿಕ್ಷಣ ನಿರ್ದೇಶಕರು**

ಇವರಿಗೆ,

1) ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಗುಲ್ಬರ್ಗ- **ಸೂಕ್ತ ಕ್ರಮಕ್ಕಾಗಿ.**
2) ಎಲ್ಲಾ ಜಿಲ್ಲೆಯ ಲೀಡ್ ಪ್ರಾಂಶುಪಾಲರುಗಳಿಗೆ-*ಈ ಬಗ್ಗೆ ತಮ್ಮ ಜಿಲ್ಲೆಯ ವ್ಯಾಪ್ತಿಗೆ ಬರುವ ಸರ್ಕಾರಿ ಪದವಿ ಕಾಲೇಜುಗಳಿಂದ ಮಾಹಿತಿಯನ್ನು* ***ಕ್ರೋಢೀಕರಿಸಿ, ದಿನಾಂಕ:23.08.2017 ರೊಳಗಾಗಿ ಈ ಕಛೇರಿ ಸಲ್ಲಿಸತಕ್ಕದ್ದು.***
3) ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ-**ತುರ್ತು ಕ್ರಮಕ್ಕಾಗಿ**

ಪ್ರತಿಯನ್ನು:

1) ಮಾನ್ಯ ಆಯುಕ್ತರ, ನಿರ್ದೇಶಕರ, ಜಂಟಿ ನಿರ್ದೇಶಕರ ಆಪ್ತ ಶಾಖೆಗೆ, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು.- ಮಾಹಿತಿಗಾಗಿ.
2) ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು- **ಮಾಹಿತಿ ಹಾಗೂ ವೆಬ್‌ಸೈಟ್** ಅಳವಡಿಕೆಗಾಗಿ.
3) ಕಛೇರಿ ಪ್ರತಿ

ಅನುಬಂಧ-1

**ವಿವಿಧ ಪದವಿ ಕಾಲೇಜುಗಳ ಅಧ್ಯಾಪಕರುಗಳು ಯು.ಜಿ.ಸಿ.ಯ ಎಫ್.ಐ.ಪಿ/ಎಫ್.ಡಿ.ಪಿ. ಯೋಜನೆಯಲ್ಲಿ ಪಿಹೆಚ್.ಡಿ / ಎಂ.ಫಿಲ್ ಉನ್ನತ ವ್ಯಾಸಂಗ/ಸಂಶೋಧನೆ ಕೈಗೊಳ್ಳಲು**

[illegible]

| ಕ್ರ ಸಂ. | ಅಧ್ಯಾಪಕರ ಹೆಸರು ಶ್ರೀ/ಶ್ರೀಮತಿ | ವಿಷಯ ಮತ್ತು ಪದನಾಮ | ಕರ್ತವ್ಯ ನಿರ್ವಹಿಸುತ್ತಿರುವ ಕಾಲೇಜಿನ ಹೆಸರು | ಸೇವೆಗೆ ಸೇರಿದ ದಿನಾಂಕ | ನಿಯೋಜನಾ ಅವಧಿ ಎಲ್ಲಿಂದ- ಎಲ್ಲಿಯವರೆಗೆ (ಕಾಲೇಜು ಶಿಕ್ಷಣ ಇಲಾಖೆಯ ಆದೇಶ ಸಂಖ್ಯೆ & ದಿನಾಂಕ) | ನಿಯೋಜನೆಗೊಂಡ ವಿಶ್ವವಿದ್ಯಾಲಯ / ಸಂಶೋಧನಾ ಸಂಸ್ಥೆ | ನಿಯೋಜನೆಯ ವಿಸ್ತರಣಾ ಅವಧಿ (ಎಲ್ಲಿಂದ- ಎಲ್ಲಿಯವರೆಗೆ) (ಕಾಲೇಜು ಶಿಕ್ಷಣ ಇಲಾಖೆಯ ಆದೇಶ ಸಂಖ್ಯೆ & ದಿನಾಂಕ | ಸಂಶೋಧನಾ ಪ್ರಬಂಧದ ವಿಷಯ | ಸಂಶೋಧನಾ ಪ್ರಬಂಧವನ್ನು ವಿಶ್ವವಿದ್ಯಾಲಯಕ್ಕೆ ಮಂಡಿಸಿದ ದಿನಾಂಕ ಮತ್ತು ಇದಕ್ಕೆ ವಿಶ್ವವಿದ್ಯಾಲಯವು ನೀಡಿದ **Acceptence /Acknowledgement** ಸಂಖ್ಯೆ & ದಿನಾಂಕ | ಪಿಹೆಚ್.ಡಿ./ ಎಂ.ಫಿಲ್ ಪ್ರಧಾನ ಮಾಡಲು ವಿಶ್ವವಿದ್ಯಾಲಯವು ಹೊರಡಿಸಿದ ಅಧಿಸೂಚನೆ / ಆದೇಶ ಸಂಖ್ಯೆ & ದಿನಾಂಕ | ಪಿಹೆಚ್.ಡಿ/ ಎಂ.ಫಿಲ್ ಪ್ರಮಾಣ ಪತ್ರ ಪಡೆದಿದ್ದಲ್ಲಿ ಅದರ ಸಂಖ್ಯೆ & ದಿನಾಂಕ | ಪಿಹೆಚ್.ಡಿ/ ಎಂ.ಫಿಲ್ ಪದವಿ ಪಡೆಯುವಲ್ಲಿ ವಿಫಲರಾಗಿದ್ದಲ್ಲಿ ಕೈಗೊಂಡಿರುವ ಕ್ರಮದ ಬಗ್ಗೆ ಮಾಹಿತಿ ಹಾಗೂ ಕ್ರಮ ಕೈಗೊಳ್ಳದಿದ್ದಲ್ಲಿ ಈ ಬಗ್ಗೆ ಸ್ಪಷ್ಟೀಕರಣ |
|---|---|---|---|---|---|---|---|---|---|---|---|---|
| **1** | **2** | **3** | **4** | **5** | **6** | **7** | **8** | **9** | **10** | **11** | **12** | **13** |
| | | | | | | | | | | | | |
| | | | | | | | | | | | | |
| | | | | | | | | | | | | |

ಪ್ರಾಂಶುಪಾಲರ ಸಹಿ